ಸ್ವಾಮಿ ವಿವೇಕಾನಂದರಿಂದ

ನಾನು ಪ್ರಭಾವಿತನಾಗಿದ್ದು ಹೀಗೆ !

ಅದು ಜುಲೈ ೧೯೮೪ರ ಸಮಯ. ದ್ವಿತೀಯ ಪಿ.ಯು.ಸಿ.ಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಿದ್ದ ನಾನು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಬಿ.ಟೆಕ್. ಪದವಿಗೆ ಸೇರಲು ಹಂಬಲಿಸುತ್ತಿದ್ದೆ. ಆದರೆ ಅಲ್ಲಿಯ ಪ್ರಾಸ್‌ಪೆಕ್ಟಸ್‌ನ್ನು ತಂದು ಓದಿದಾಗ ನನಗೆ ನಿರಾಸೆ ಕಾದಿತ್ತು. ಬಿ.ಎಸ್ಸಿ. ಮುಗಿಸಿದವರು ಮಾತ್ರ ಬಿ.ಟೆಕ್. ಪದವಿಗೆ ಸೇರಲು ಅರ್ಹರು ಎಂದು ಅದರಲ್ಲಿ ಸ್ಪಷ್ಟವಾಗಿ ತಿಳಿಸಿದ್ದರು. ಕೆಳ ಮಧ್ಯಮ ವರ್ಗದಿಂದ ಬಂದವನಾದ ನನಗೆ ಹೆಚ್ಚುವರಿ ಮೂರು ವರ್ಷ ಬಿ.ಎಸ್ಸಿ. ಪದವಿಗೆ ವ್ಯಯಿಸಲು ಆರ್ಥಿಕ ಅನುಕೂಲತೆ ಇರಲಿಲ್ಲ. ಐದನೇ ತರಗತಿಯಿಂದಲೇ ನಾನು ಹಸು ಸಾಕಿ, ಹಾಲು ಮಾರುವ ಕಾಯಕದಲ್ಲಿ ಮನೆಯವರ ಜೊತೆ ಕೈಜೋಡಿಸಿದ್ದೆ. ಜೊತೆಗೆ ಪಿ.ಯು.ಸಿ. ಓದುತ್ತಿದ್ದಾಗ ಶಾಲಾಮಕ್ಕಳಿಗೆ ಮನೆಪಾಠ ಹೇಳಿ ಅಲ್ಪ-ಸ್ವಲ್ಪ ಗಳಿಸಿ ಮನೆಗೆ ಕೊಡುತ್ತಿದ್ದೆ. ಮನೆಯವರ ಕಷ್ಟ ಚೆನ್ನಾಗಿ ತಿಳಿದಿದ್ದರಿಂದ ಆದಷ್ಟು ಬೇಗ ಕೆಲಸಕ್ಕೆ ಸೇರಿ ಸಂಪಾದನೆ ಮಾಡುವುದು ನನ್ನ ಗುರಿಯಾಗಿತ್ತು. ಮೈಸೂರಿನ ಹೊರಗೆ ಇದ್ದುಕೊಂಡು ಓದುವುದು ಕನಸೇ ಆಗಿತ್ತು. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಬಾಗಿಲು ನನಗೆ ತೆರೆಯುವ ಮುನ್ನವೇ ಮುಚ್ಚಿಹೋಯಿತೇನೋ ಎಂದು ಭಾಸವಾಗುತ್ತಿತ್ತು. ಒಲ್ಲದ ಮನಸ್ಸಿನಿಂದ ಸಿ.ಇ.ಟಿ ಪರೀಕ್ಷೆಯ ಫಲಿತಾಂಶಕ್ಕೆ ಕಾಯಲಾರಂಭಿಸಿದೆ. ಫಲಿತಾಂಶವೇನೋ ಬಂತು, ಆದರೆ ನನ್ನ ದುರ್ದೈವಕ್ಕೆ ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶವನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿತ್ತು. ಮೆಡಿಕಲ್ ವಿಭಾಗದಲ್ಲಿ ನನಗೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಟ್ಟಿದ್ದರು. ಬೇರೇನೂ ದಾರಿಯಿಲ್ಲದೆ (ಮನೆಯವರ ಒತ್ತಡವೂ ತೀವ್ರವಾಗಿದ್ದುದರಿಂದ) ಮೆಡಿಕಲ್ ಕಾಲೇಜಿಗೆ ಹೋಗಲು ಪ್ರಾರಂಭಿಸಿದೆ. ಆದರೆ ಇಂಜಿನಿಯರಿಂಗ್ ಸೇರುವ ಆಸೆ ಇನ್ನೂ ಜೀವಂತವಾಗಿತ್ತು.

೧೯೮೪ರ ಆಗಸ್ಟ್ ೨೮ – ಮೆಡಿಕಲ್ ಕಾಲೇಜಿನಲ್ಲಿ ನನ್ನ ಮೊದಲ ದಿನ. ಶರೀರಕ್ರಿಯಾಶಾಸ್ತ್ರದ ಪ್ರಾಧ್ಯಾಪಕರಾದ ಡಾ. ರಾಜಗೋಪಾಲ್ ಅವರು ಹೊಸ ವಿದ್ಯಾರ್ಥಿಗಳಾದ ನಮಗೆ, "ಮೆಡಿಕಲ್ ಕೋರ್ಸ್‌ಗೆ ಏಕೆ ಸೇರಿದಿರಿ?" ಎಂಬ ಪ್ರಶ್ನೆಯೊಡ್ಡಿದರು. "ನಾವು ಜನರ ಸೇವೆ ಮಾಡಬೇಕು, ಇದು ಅತ್ಯಂತ ಶ್ರೇಷ್ಠವಾದ ವೃತ್ತಿ" ಇತ್ಯಾದಿಯಾಗಿ ಎಲ್ಲರೂ ತಮ್ಮ ಮನದ ಇಂಗಿತವನ್ನು ತಿಳಿಸಿದರು. ನನ್ನ ಸರದಿ ಬಂದಾಗ, "ನಾನು ಇಂಜಿನಿಯರಿಂಗ್ ಸೀಟಿಗಾಗಿ ಕಾಯುತ್ತಿದ್ದೇನೆ" ಎಂಬ ಸತ್ಯವನ್ನು ಹೊರಹಾಕಿದೆ. ನನ್ನ ಮಾತಿನಿಂದ ಪ್ರಾಧ್ಯಾಪಕರಾದಿಯಾಗಿ ಅಲ್ಲಿದ್ದ ಎಲ್ಲರಿಗೂ ಅಚ್ಚರಿಯಾಯಿತು. ತಕ್ಷಣ ಪ್ರಾಧ್ಯಾಪಕರು ಚರ್ಚೆ ಮುಂದುವರಿಸುತ್ತ, "ಮೆಡಿಕಲ್ ಸೇರಲು ಎಷ್ಟು ಶುಲ್ಕ ಕಟ್ಟಿದ್ದೀಯೆ?" ಎಂದು ಕೇಳಿದರು. "೫೬೧ ರೂ." ಎಂದು ನಾನು ಉತ್ತರಿಸಿದೆ. "ಇಡೀ ಮೆಡಿಕಲ್ ವ್ಯಾಸಂಗಕ್ಕೆ ಎಷ್ಟು ಶುಲ್ಕ ಕಟ್ಟಬೇಕಾಗುತ್ತದೆ?" ಎಂದು ಕೇಳಿದರು. ಲೆಕ್ಕ ಹಾಕಿ, "೨,೫೦೦ ರೂ." ಎಂದೆ. "ನಿನ್ನನ್ನು ವೈದ್ಯನನ್ನಾಗಿ ಮಾಡಲು ಸರ್ಕಾರ ಎಷ್ಟು ಖರ್ಚುಮಾಡುತ್ತದೆ, ಗೊತ್ತೇ?" ಎಂದು ಪ್ರಶ್ನಿಸಿದರು. ಗೊತ್ತಿಲ್ಲವೆಂದು ನಾನು ತಲೆಯಲ್ಲಾಡಿಸಿದೆ. ಅದಕ್ಕೆ ಅವರು, "ಎರಡು ಲಕ್ಷ ರೂಪಾಯಿಗಳು. ಇದನ್ನು ಯಾರು ಭರಿಸುತ್ತಾರೆ ಗೊತ್ತೇ? ಈ ರಸ್ತೆಯಲ್ಲಿರುವ ಪ್ರತಿಯೊಬ್ಬರೂ" ಎಂದು ತರಗತಿಯ ಎದುರುಕಾಣುತ್ತಿದ್ದ ಮುಖ್ಯರಸ್ತೆ ಕಡೆ ಕೈತೋರುತ್ತಾ ಹೇಳಿದರು.

ಅವರ ಹರಿತವಾದ ಮಾತುಗಳು ನನಗೆ ಆಳವಾಗಿ ನಾಟಿತಲ್ಲದೆ, ಸ್ವಾಮಿ ವಿವೇಕಾನಂದರ ಈ ವಾಣಿ ತಕ್ಷಣ ನೆನಪಾಯಿತು: So long as millions die of hunger and ignorance I call each person a traitor who having been educated at the cost of the millions, paid not the least heed to them. (ಎಲ್ಲಿಯವರೆಗೆ ಲಕ್ಷಾಂತರ ಜನ ಹಸಿವು, ಅಜ್ಞಾನದಿಂದ ಬಳಲುವರೊ, ಅಲ್ಲಿಯವರೆಗೆ ಜನಸಾಮಾನ್ಯರ ಹಣದ ಸಹಾಯದಿಂದ ಶಿಕ್ಷಣ ಪಡೆದು, ಅವರನ್ನೇ ಕಡೆಗಾಣಿಸಿದ ಪ್ರತಿಯೊಬ್ಬ ಶಿಕ್ಷಿತನನ್ನು ನಾನು 'ದೇಶದ್ರೋಹಿ' ಎನ್ನುತ್ತೇನೆ). ಸ್ವಾಮಿ ವಿವೇಕಾನಂದರ ಬಗ್ಗೆ ಹೆಚ್ಚು ಅರಿವು ಇಲ್ಲದಿದ್ದರೂ, ಏಕೆ ಮತ್ತು ಹೇಗೆ ಈ ವಾಣಿ ನನಗೆ ಆ ಕ್ಷಣ ನೆನಪಾಯಿತು ಎಂಬುದು ನನಗೆ ತಿಳಿಯದು. ಆದರೂ ಈ ವಾಣಿ ನನ್ನನ್ನು ಬಡಿದೆಚ್ಚರಿಸಿತ್ತು. ಇತರರಿಗೆ ನಾನು ಎಷ್ಟು ಋಣಿಯಾಗಿದ್ದೇನೆ ಎಂದು ಆ ಕ್ಷಣದಲ್ಲಿ ನನಗೆ ಅರ್ಥವಾಯಿತು. ಯಾವುದೇ ವೃತ್ತಿ ಆಯ್ದುಕೊಂಡರೂ, ನನ್ನ ಜನಸೇವೆಯ ಕರ್ತವ್ಯವನ್ನು ನಾನು ಮಾಡಿ ಜನರ– ದೇಶದ ಋಣ ತೀರಿಸಬೇಕೆಂಬ ಅರಿವಾಯಿತು. ಹೀಗಾಗಿ, ಸ್ವಾಮೀಜಿಯವರೇ ನನ್ನನ್ನು ಆಯ್ದುಕೊಂಡರೇನೋ ಎಂದು ನನಗೆ ಹಲವು ಬಾರಿ ಅನ್ನಿಸಿದ್ದುಂಟು.

ನಂತರದ ದಿನಗಳಲ್ಲಿ ವಿವೇಕಾನಂದರ ಬಗ್ಗೆ ಹೆಚ್ಚು ಓದುತ್ತಾ, ತಿಳಿದುಕೊಳ್ಳುತ್ತಾ ಹೋದೆ. ೧೯೮೪ರ ಡಿಸೆಂಬರ್‌ನಲ್ಲಿ **'ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್'** ಸಂಸ್ಥೆಯನ್ನು ಪ್ರಾರಂಭಿಸಿದ ಸ್ನೇಹಿತರ ಭಾಗವಾಗಿ ನಾನು ಸೇವಾನಿರತನಾದೆ. ದೈನಂದಿನ ಚಟುವಟಿಕೆಗಳಿಗಿರಲಿ, ಸಾಂಸ್ಥಿಕ ಅಭಿವೃದ್ಧಿಯ ಆಯಾಮಕ್ಕಿರಲಿ, ರಾಷ್ಟ್ರನಿರ್ಮಾಣದ ಕರ್ತವ್ಯಕ್ಕಾಗಲಿ – ಪ್ರತಿಯೊಂದರಲ್ಲೂ ಸ್ವಾಮೀಜಿಯವರ ನಡೆ–ನುಡಿ ನನಗೆ ಮಾರ್ಗದರ್ಶನ ನೀಡಿದೆ. ಕ್ಲಿಷ್ಟಕರ ಪರಿಸ್ಥಿತಿಗಳು ಎದುರಾದಾಗ ಸ್ವಾಮೀಜಿಯ ಕೃತಿಗಳಲ್ಲಿ, ತತ್ತ್ವಗಳಲ್ಲಿ ಪರಿಹಾರ ಕಂಡುಕೊಂಡಿದ್ದೇನೆ, ಹಾಗೆಯೇ ಮುನ್ನಡೆಯುತ್ತಿದ್ದೇನೆ.

– **ಡಾ. ಎಮ್. ಎ. ಬಾಲಸುಬ್ರಹ್ಮಣ್ಯ,** ವಿವೇಕಾನಂದ ಯೂತ್ ಮೂವ್‌ಮೆಂಟ್, ಸರಗೂರು, ಮೈಸೂರು ಜಿಲ್ಲೆ.